ಆ) ಭಾರತ ಮತ್ತು ಡೆನ್ಮಾರ್ಕ್ ವಿೂನುಗಾರಿಕೆ ಯೋಜನೆಯಲ್ಲಿ ಕೈಗೊಳ್ಳಲಾದ ತಜ್ಞರ ಮತ್ತು ಇತರೆ ಅಧಿಕಾರಿಗಳ ವಸತಿ ಗೃಹಗಳ ನಿರ್ಮಾಣವು ಮುಗಿದಿದ್ದು ಸಂಬಂಧಪಟ್ಟವರಿಗೆ ವಹಿಸಿಕೊಡಲಾಗಿದೆ.

ಇ) ಕರಕುಶಲ ಕೆಲಸಗಾರರ ಮತ್ತು ಚರ್ಮೋದ್ಯೋಗಿಗಳಿಗಾಗಿ ನಿರ್ಮಿಸಲಾದ ವಸತಿ ಗೃಹಗಳ ನಿರ್ಮಾಣ ಮುಗಿದಿದ್ದು ಈ ಗೃಹಗಳನ್ನು ಸಂಬಂಧಪಟ್ಟ ನಿಗಮಗಳಿಗೆ ವಹಿಸಿಕೊಟ್ಟಿದ್ದೇವೆ.

ಈ) ೨೫ ಲಕ್ಷ ರೂ. ಯೋಜನೆಯಲ್ಲಿ ಕೈಗೊಳ್ಳಲಾದ ಎಲ್ಲ ಕಾರ್ಯಗಳೂ ಮುಗಿದಿದ್ದು ಸಂಬಂಧ ಪಟ್ಟವರಿಗೆ ವಹಿಸಿಕೊಡಲಾಗಿದೆ

ಉಳ್ಳಾಲ ಗ್ರಾಮಕ್ಕೆ ನಲ್ಲಿ ನೀರು ಸರಬರಾಜು

೧೧೬೭. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).— ಮಾನ್ಯ ಗ್ರಾಮಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಮಂತ್ರಿ ವರ್ಗ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ಗ್ರಾಮಕ್ಕೆ ನಲ್ಲಿ ನೀರನ್ನು ಒದಗಿಸಲು ಸರ್ಕಾರದವರು ಮಂಜೂರಾತಿ ನೀಡಿರುವರೆ ? ಹಾಗಿದ್ದಲ್ಲಿ ಎಂದಂ ಕೆಲಸವನ್ನು ಪ್ರಾರಂಭ ವಾಡಲಾಗಿದೆ?

ಆ) ಪ್ರಾರಂಭಿಸಿದ್ದರೆ ಎಷ್ಟು ಕೆಲಸ ಆಗಿದೆ ಮತ್ತು ಇನ್ನಷ್ಟು ಕೆಲಸ ಉಳಿದಿದೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).

ಅ) ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಗೆ ಸರ್ಕಾರದಿಂದ ಳ.೧೫ ಲಕ್ಷ ರೂ.ಗಳಿಗೆ ಮಂಜೂರಾತಿ ನೀಡಲಾಗಿದೆ. ಈ ಕೆಲಸವನ್ನು ೫-೭-೭೮ರಲ್ಲಿ ಪ್ರಾರಂಭಿಸಿ ದಿನಾಂಕ. ೨೫-೨-೮೫ಕ್ಕೆ ಕಾರ್ಯಗತಗೊಳಿಸಿ ಪಂಚಾಯ್ತಿಗೆ ವಹಿಸಿಕೊಡಲಾಗಿದೆ. ಇತ್ತೀಚೆಗೆ ಪುನರುದ್ಧಾರದ ನೀರು ಸರಬರಾಜು ಯೋಜನೆ ಅಂದಾಜು ಪತ್ರಿಕೆಯು ರೂ.೧೦ ಲಕ್ಷ ಮಂಜೂರಿಗಾಗಿ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಪುನರುದ್ಧಾರದ ಕೆಲಸ ಮಂಜೂರಾದ ನಂತರ ಪ್ರಾರಂಭಿಸಲಾಗುವುದು.

ಜೀತ ವಿಮುಕ್ತರಿಗೆ ಸಂಬಂಧಪಟ್ಟಂತೆ ಜಾಗ್ರತೆ ಸಮಿತಿಗಳನ್ನು ರಚಿಸುವ ಬಗ್ಗೆ

೧೦೨೫. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ವರ್ಗ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರದವರು ಎಲ್ಲಾ ಜಿಲ್ಲೆಗಳಲ್ಲಿಯೂ ಜೀತ ವಿಮುಕ್ತರಿಗೆ ಸಂಬಂಧಪಟ್ಟಂತೆ ಜಾಗ್ರತೆ ಸಮಿತಿಗಳನ್ನು ರಚಿಸಿರುವರೆ ಮತ್ತು ರಚಿಸಿದ್ದಲ್ಲಿ ಅವುಗಳ ವಿವರಗಳನ್ನು ಕೊಡಿ ?

ಆ) ಎಷ್ಟು ಜಿಲ್ಲೆಗಳಲ್ಲಿ ಸಮಿತಿಗಳನ್ನು ರಚನೆ ಮಾಡಿಲ್ಲ ಮತ್ತು ಅದಕ್ಕೆ ಕಾರಣಗಳೇನು ?

ಇ) ಬೆಳಗಾಂ ಜಿಲ್ಲೆಯಲ್ಲಿ ಸಮಿತಿಯನ್ನು ರಚಿಸಲಾಗಿತ್ತೇ ಮತ್ತು ರಚಿಸಿದ್ದಲ್ಲಿ ಅದರ ವಿವರ ಗಳನ್ನು ಕೊಡಿ ?

ಈ) ಬೆಳಗಾಂ ಜಿಲ್ಲೆಯಲ್ಲಿ ಎಷ್ಟು ಮಂದಿ ಜೀತ ವಿಮುಕ್ತರಿಗೆ ಪುನರ್ ವಸತಿಯನ್ನು ಕಲ್ಪಿಸಲಾಗಿದೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು).—

ಅ) ಮತ್ತು ಆ) ಜಾಗ್ರತ ಸಮಿತಿಗಳನ್ನು ಈಗಾಗಲೇ ರಚಿಸಲಾಗಿದ್ದು ಅವುಗಳ ಅವಧಿ ಮುಗಿದಿರುತ್ತದೆ. ಆದುದರಿಂದ ಹೊಸ ಸಮಿತಿಗಳನ್ನು ರಚಿಸಲು ಸರ್ಕಾರ ಕ್ರಮತೆಗೆದು ಕೊಂಡಿರುತ್ತದೆ.